**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ**

# ಸಿ.ಸಿ.ನಂ.554/2017

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸುರೇಶ | ಸಿ.ಡಬ್ಲ್ಯೂ-1 |
| ತಂದೆಯ ಹೆಸರು / ಗಂಡನ ಹೆಸರು | : | ಸಿದ್ದರಾಜೇ ಅರಸ್ | ಪಿ.ಡಬ್ಲ್ಯೂ-2 |
| ವಯಸ್ಸು | : | 65 ವರ್ಷ | - |
| ಉದ್ಯೋಗ | : | ನಿವೃತ್ತ ಪಿ.ಎಸ್.ಐ | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ **08.02.2024.** |
| ವಾಸಸ್ಥಳ | : | ಮೈಸೂರು | - |

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

ನಾನು ಬೀಚನಹಳ್ಳಿ ಪೊಲೀಸ್ ಠಾಣೆಯಲ್ಲಿ ಅಕ್ಟೋಬರ್ 2016 ರಿಂದ ಡಿಸೆಂಬರ್ 2017 ರವರೆಗೆ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 19.01.2017 ರಂದು ಸಂಜೆ 5.00 ಗಂಟೆಯ ಸಮಯದಲ್ಲಿ ನಾನು ಠಾಣೆಯಲ್ಲಿ ಇರುವಾಗ ಬೋರೇದೇವರಮುಂಟಿ ಗ್ರಾಮದಲ್ಲಿ ವೆಂಕಟರಾಜು ಬಿನ್ ಗೋಪಾಲಯ್ಯ ಎಂಬುವವರು ಅವರ ಮನೆಯ ಬಳಿ ಅಕ್ರಮವಾಗಿ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿರವುದಾಗಿ ಮಾಹಿತಿ ಬಂದ ಮೇರೆಗೆ ನಾನು ಸ್ವ ವರದಿಯನ್ನು ತಯಾರಿಸಿ ಚಾಸಾ-7 ರವರಿಗೆ ವರದಿ ನೀಡಿ ಪ್ರಕರಣ ದಾಖಲಿಸುವಂತೆ ಸೂಚಿಸಿರುತ್ತೇನೆ ಅದರಂತೆ ಠಾಣಾ ಮೊಕದ್ದಮೆ ಸಂಃ 7/2017 ರಂತೆ ಪ್ರಕರಣ ದಾಖಲು ಮಾಡಲಾಗಿರುತ್ತದೆ.

ನಂತರ ನಾನು ಮತ್ತು ಚಾಸಾ-4, ಚಾಸಾ-5 ರವರೊಡನೆ ನಮ್ಮ ಇಲಾಖಾ ಜೀಪಿನಲ್ಲಿ ಬೋರೇದೇವರಮುಂಟಿ ಗ್ರಾಮದ ಬಸ್ ನಿಲ್ದಾಣದ ಬಳಿ ಹೋಗಿ ಅಲ್ಲಿ ಅದೇ ಗ್ರಾಮದ ಚಾಸಾ-2 ಮತ್ತು 3 ರವರಿಗೆ ಪಂಚರಾಗಿ ಬರುವಂತೆ ತಿಳಿಸಿದ್ದು ಅವರು ಒಪ್ಪಿಕೊಂಡ ಮೇರೆಗೆ ಅವರನ್ನು ಕರೆದುಕೊಂಡು ಸ್ಥಳಕ್ಕೆ ಹೋಗಿ ನೋಡಲಾಗಿ ವೆಂಕಟರಾಜುರವರ ಮನೆಯ ಮುಂದೆ ಅವರು ಮದ್ಯದ ಪೌಚುಗಳನ್ನು ಇಟ್ಟುಕೊಂಡು ಅಕ್ರಮವಾಗಿ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಮದ್ಯದ ಪೌಚುಗಳನ್ನು ಮಾರಾಟ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ನಂತರ ನಮ್ಮನ್ನು ನೋಡಿ ಆರೋಪಿಯು ಓಡಿ ಹೋಗಲು ಪ್ರಯತ್ನಿಸಿದಾಗ ಅವನನ್ನು ಹಿಡಿದು ಪ್ರಶ್ನಿಸಿದಾಗ ಆತನ ಹೆಸರು ವೆಂಕಟರಾಜು ಬಿನ್ ಗೋಪಾಲಯ್ಯ , ಬೋರೇದೇವರಮುಂಟಿ ಗ್ರಾಮ ಎಂದು ತಿಳಿಸಿದ್ದು , ಆತನ ಬಳಿ ಇದ್ದ ಪ್ಲಾಸ್ಟಿಕ್ ಚೀಲವನ್ನು ಪಂಚರ ಸಮಕ್ಷಮ ಪರಿಶೀಲಿಸಲಾಗಿ 90 ಎಂ.ಎಲ್ ನ ವಿಂಡ್ಸರ್ ಡೀಲಕ್ಸ್ ವಿಸ್ಕಿಯ 50 ಪೌಚುಗಳು ಇರುವುದು ಕಂಡು ಬಂದಿರುತ್ತದೆ. ಹಾಗೂ ಸಾರ್ವಜನಿಕರಿಗೆ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡಿ ಬಂದ ಹಣ ರೂ.200/- ಇರುವುದು ಕಂಡುಬಂದಿರುತ್ತದೆ.

ನಂತರ ಸಂಜೆ 7.15 ರಿಂದ 8.15 ರವರೆಗೆ ಮಹಜರ್ ಕ್ರಮ ಜರುಗಿಸಿ ಚಾಸಾ-2 ಮತ್ತು 3 ರವರ ಸಮಕ್ಷಮ ಅಮಾನತ್ತು ಮಹಜರ್ ಕ್ರಮವನ್ನು ಜರುಗಿಸಿ ಆರ್.ಎಫ್.ಎಸ್.ಎಲ್ ಗೆ ಕಳುಹಿಸುವ ಸಲುವಾಗಿ 30 ಪೌಚುಗಳನ್ನು ಪ್ರತ್ಯೇಕವಾಗಿ ತೆಗೆದು ಬಿಳಿ ಬಟ್ಟೆಯಿಂದ ಸುತ್ತಿ ಎನ್ ಎಂಬ ಅಕ್ಷರದಿಂದ ಸೀಲ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇವೆ. ನಂತರ ಮಾಲುಪಟ್ಟಿ ಸಂಃ 8/2017 ರಂತೆ ನಮೂದು ಮಾಡಿರುತ್ತೇವೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ**-2** ಎಂದು ಸಾಕ್ಷಿಯ ಸಹಿಯನ್ನು ನಿಪಿ**-2(ಎ)** ಎಂದು ಗುರುತಿಸಲಾಯಿತು. ಅಮಾನತ್ತು ಮಹಜರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಚಾಸಾ-1 ರವರ ಸಹಿಯನ್ನು ನಿಪಿ**-1(ಬಿ)** ಎಂದು ಗುರುತಿಸಲಾಯಿತು. ಮಾಲುಪಟ್ಟಿಯನ್ನು ನಿಪಿ**-3** ಎಂದು ಸಾಕ್ಷಿಯ ಸಹಿಯನ್ನು ನಿಪಿ**-3(ಎ)** ಎಂದು ಗುರುತಿಸಲಾಯಿತು.

ನಂತರ ತನಿಖೆಯನ್ನು ಮುಂದುವರಿಸಿ ಚಾಸಾ-2 ರಿಂದ 5 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿಃ 03.03.2017 ರಂದು ಅಮಾನತ್ತುಪಡಿಸಿಕೊಂಡ ಸಾರಾಯಿ ಪೌಚುಗಳನ್ನು ಚಾಸಾ-6 ರವರ ಮುಖಾಂತರ ಆರ್.ಎಫ್.ಎಸ್.ಎಲ್ ಗೆ ಕಳುಹಿಸಿಕೊಟ್ಟಿರುತ್ತೇನೆ. ದಿಃ 24.04.2017 ರಂದು ರಾಸಾಯನಿಕ ಪರೀಕ್ಷೆಯ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ವರದಿಯನ್ನು ನಿಪಿ**-4** ಎಂದು ಸಾಕ್ಷಿಯ ಸಹಿಯನ್ನು ನಿಪಿ**-4(ಎ)** ಎಂದು ಗುರುತಿಸಲಾಯಿತು.

ರಾಸಾಯನಿಕ ಪರೀಕ್ಷೆಯ ನಂತರ ಖಾಲಿ ಪೌಚುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು ಸದರಿ ಸಾರಾಯಿ ಪೌಚುಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು **ಮು.ಮ-1 ರಿಂದ 30** ಎಂದು ಗುರುತಿಸಲಾಯಿತ. ಪ್ಲಾಸ್ಟಿಕ್ ಚೀಲವನ್ನು **ಮು.ಮ.31** ಎಂದು ಗುರುತಿಸಲಾಯಿತು. ರೂ.100/- ಮುಖಬೆಲೆಯ ಎರಡು ನೋಟುಗಳಿದ್ದು ಸಾಕ್ಷಿಯು ಹಣವನ್ನು ನೋಡಿ ಗುರುತಿಸುತ್ತಾರೆ. ಎರಡು ನೋಟುಗಳನ್ನು ಒಟ್ಟಿಗೆ ಸೇರಿಸಿ **ಮು.ಮ-32** ಎಂದು ಗುರುತಿಸಲಾಯಿತು.

ದಿಃ 25.04.2017 ರಂದು ಆರೋಪಿಯ ವಿರುದ್ಧ ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ಮಾನ್ಯ ಘನ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ.ಜಿ.ಕೆ ವಕೀಲರಿಂದಃ</u>**

ಘಟನೆ ನಡೆಯಿತು ಎಂದು ಹೇಳಿದ ಸ್ಥಳಕ್ಕೆ ಹೋದಾಗ ಸಮಯ ಎಷ್ಟು ಆಗಿತ್ತು ಎಂದರೆ ಸಾಕ್ಷಿಯ ಸಂಜೆ 5.00 ಗಂಟೆಯಾಗಿತ್ತು ಎಂದು ನುಡಿಯುತ್ತಾರೆ. ಪೊಲೀಸ್ ಠಾಣೆಯಿಂದ ಘಟನೆ ನಡೆಯಿತು ಎಂದು ಹೇಳಿದ ಸ್ಥಳ ಎಷ್ಟು ದೂರ ಇರುತ್ತದೆ ಎಂದರೆ ಸಾಕ್ಷಿಯು 10 ಕಿ.ಮೀ ಎಂದು ನುಡಿಯುತ್ತಾರೆ. ಬಾತ್ಮಿ ಬಂದ ನಂತರ ತಾವು ಪ್ರಕರಣವನ್ನು ದಾಖಲು ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಬಾತ್ಮಿದಾರರು ಮಾಹಿತಿ ಕೊಟ್ಟ ಮೇರೆಗೆ ತಾವು ಪ್ರಕರಣ ದಾಖಲು ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಬಾತ್ಮಿದಾರರ ಹೆಸರು ಹೇಳುವಿರಾ ಎಂದರೆ ಸಾಕ್ಷಿಯು ಹೇಳಲು ಆಗುವುದಿಲ್ಲ ಎನ್ನುತ್ತಾರೆ.

ಆರೋಪಿಯು ತನ್ನ ಮನೆಯ ಮುಂದೆ ಅಕ್ರಮವಾಗಿ ಹಣ ಪಡೆಯುವ ಉದ್ದೇಶದಿಂದ ಸಾರಾಯಿ ಪೌಚುಗಳನ್ನು ಮಾರಾಟ ಮಾಡುತ್ತಿದ್ದ ಎಂದು ತಾವು ಹೇಳಿದ್ದು ಸದರಿ ಮನೆ ಯಾರಿಗೆ ಸೇರಿದ್ದು ಎಂದು ದಾಖಲೆ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಪಂಚರುದಾರರಿಗೆ ಲಿಖಿತ ನೋಟೀಸ್ ಕೊಟ್ಟಿಲ್ಲ ಎಂದರೆ ಸರಿ , ಸಾಕ್ಷಿಯು ಮುಂದುವರಿದು ಮೌಖಿಕವಾಗಿ ಹೇಳಿ ಕರೆದುಕೊಂಡು ಹೋಗಿರುತ್ತೇವೆ ಎಂದು ನುಡಿಯುತ್ತಾರೆ.

ರೂ.200/- ಹಣವನ್ನು ಆರೋಪಿಯಿಂದ ದಾಳಿ ಮಾಡುವ ಕಾಲಕ್ಕೆ ಅಮಾನತ್ತುಪಡಿಸಿಕೊಂಡಿರುತ್ತೇವೆ ಎಂದು ಹೇಳಿದ್ದು ಎಷ್ಟು ಮುಖಬೆಲೆಯ ನೋಟುಗಳು ಎಂದು ಫಿರ್ಯಾದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ.

ಪ್ರತಿಯೊಂದು ಸಾರಾಯಿ ಪೌಚಿನ ಮೇಲೆ ಸೀರಿಯಲ್ ಮತ್ತು ಬ್ಯಾಚ್ ನಂಬರ್ ಇರುತ್ತದೆ ಎಂದರೆ ಸರಿ , ಸದರಿನಂಬರನ್ನು ಪಿರ್ಯಾದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಮು.ಮ.31 ಚೀಲದ ಮೇಲೆ ಯಾವುದೇ ಗುರುತು ಮಾಡಿಲ್ಲ ಎಂದರೆ ಸರಿ .

ದಿಃ 19.01.2017 ರಂದು ತಮಗೆ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿರುವ ಬಗ್ಗೆ ಬಾತ್ಮಿ ಬಂದಿದ್ದು, ಸ್ಥಳಕ್ಕೆ ಹೋಗಿ ಮದ್ಯದ ಪೌಚುಗಳನ್ನು ವಶಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಠಾಣೆಯ ಅಂಕಿ ಅಂಶಗಳಿಗಾಗಿ ನಮ್ಮ ಠಾಣೆಯಲ್ಲಿ ವಿಲೇವಾರಿಯಾಗದೆ ಬಿದ್ದಿದ್ದ ಸಾರಾಯಿ ಪೌಚುಗಳನ್ನು ಈ ಕೇಸಿಗೆ ಅಳವಡಿಸಿ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನಿಗೂ, ಈ ಪ್ರಕರಣಕ್ಕೂ ಮತ್ತು ಮುದ್ದೆ ಮಾಲುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

**(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**